# ಬಿಂದಿ ಆಯ್ಕೆ ಹೀಗಿರಲಿ..







ಮುಖಕ್ಕೆ ಬಿಂದಿ ಇಟ್ಟರೆ ಅದು ಸಂಸ್ಕೃತಿ, ಸಂಪ್ರದಾಯದ ಪ್ರತೀಕ. ಈಗ ಬಿಂದಿಯಲ್ಲೂ ಹಲವು ವೈವಿಧ್ಯಗಳು ಬಂದಿದ್ದು ಫ್ಯಾಷನೆಬಲ್ ಆಗಿದೆ.

■ ಪ.ನಾ.ಹಳ್ಳಿ ಹರೀಶ್‌ಕುಮಾರ್

ಬಿಂದಿ ಸಂಪ್ರದಾಯದ ಪ್ರತೀಕವಾದರೂ ಅದೀಗ ಫ್ಯಾಷನ್ ಕೂಡ ಆಗಿದೆ. ಅಂದದ ಮುಖಕ್ಕೆ ಅಲಂಕಾರದಷ್ಟೇ ಮುಖ್ಯವಾದುದು ಹಣೆಯ ಮೇಲಿನ ಬಿಂದಿ. ಹಣೆಯ ಮೇಲಿನ ಬಿಂದಿಯಿಂದಲೇ ಮುಖಕ್ಕೆ ನಿಜವಾದ ಕಳೆ ಬರುವುದು,

ಹಣೆಗೆ ಬೊಟ್ಟು ಇಡೋದು ನಮ್ಮ ಸಂಸ್ಕೃತಿಯ ಪ್ರತೀಕ, ಬೋಳು ಹಣೆಯ ಹುಡುಗಿ ಎಷ್ಟೇ ಬೆಳ್ಳಗಿದ್ದರೂ ಚೆನ್ನಾಗಿ ಕಾಣಲಾರಳು. ಮೊದಲೆಲ್ಲಾ ಹಣೆ ತುಂಬಾ ಕುಂಕುಮ ಇಡುತ್ತಿದ್ದ ಮಹಿಳೆಯರು ಇಂದು ಫ್ಯಾಷನ್ ಪ್ರಿಯರಾಗಿದ್ದು ವಿಧ ವಿಧದ ಬಿಂದಿಗಳನ್ನು ಖರೀದಿಸಿ ಧರಿಸುತ್ತಿದ್ದಾರೆ. ಬಿಂದಿಗಳು ನಮ್ಮ ಮುಖದ ಆಕಾರವನ್ನು ಮರೆಮಾಚಿಸುತ್ತಿರುತ್ತವೆ. ಬಿಂದಿಯಿಲ್ಲದಿದ್ದರೆ ಅಲಂಕಾರ ಪೂರ್ಣವಾಗುವುದೇ ಇಲ್ಲ. ಮಾರುಕಟ್ಟೆಯಲ್ಲಿ ಇಂದು ತರಹೇವಾರಿ ಮಾದರಿಯ ಹಾಗೂ ಬಣ್ಣದ ಬಿಂದಿಗಳು ಲಭ್ಯವಿದ್ದು, ತಮ್ಮ ಮುಖದ ಆಕಾರಕ್ಕೆ ಯಾವ ರೀತಿಯ ವಿನ್ಯಾಸದ ಬಿಂದಿಗಳು ಚೆನ್ನಾಗಿ ಒಪ್ಪುತ್ತವೆ ಎಂಬ ಅನುಸಾರವಾಗಿ ಕೊಳ್ಳುವುದು ಸೂಕ್ತ.

ಬಿಂದಿಯು ನೀವು ಧರಿಸಿರುವ ವಸ್ತ್ರದ ವಿನ್ಯಾಸ ಹಾಗೂ ಬಣ್ಣಕ್ಕೆ ಒಪ್ಪುವಂತಿರಲಿ.

ಯಾವಾಗಲೂ ಒಂದೇ ಆಕಾರದ ಬಿಂದಿಯನ್ನು ಧರಿಸುವ ಬದಲು ಮೂರ್ನಾಲ್ಕು ಆಕಾರದ ಬಿಂದಿಗಳನ್ನು ಆಯ್ದು ಸಂದರ್ಭಾನುಸಾರ ಧರಿಸಿ.

ಉತ್ತಮ ಗುಣಮಟ್ಟದ ಬಿಂದಿಗಳನ್ನು ಬಳಸಿ, ಕಳಪೆ ಗುಣಮಟ್ಟದ ಬಿಂದಿ ಬಳಕೆ ಬೇಡ.

ಹಣೆಯ ಮಧ್ಯಭಾಗದಲ್ಲಿ ಬಿಂದಿಯಿಂದಾಗಿರುವ ಬಿಳಿಯ ಕಲೆಗಳ ನಿಯಂತ್ರಣಕ್ಕೆ ಆಗಾಗ್ಗೆ ಕೊಬ್ಬರಿ ಎಣ್ಣೆ, ಆಲಿವ್ ಎಣ್ಣೆ ಇಲ್ಲವೇ ಹರಳೆಣ್ಣೆಯಿಂದ ಮುಖಕ್ಕೆ ಮಸಾಜ್ ಮಾಡಿಕೊಳ್ಳುವುದು ಉತ್ತಮ.

ಬಿಂದಿ ಬಳಕೆಯಿಂದ ಚರ್ಮಕ್ಕೆ ಅಲರ್ಜಿಯಾಗುವುದಿದ್ದರೆ ಬಳಸುವುದು ಬೇಡ

ಮಳೆಗಾಲದಲ್ಲಿ ವಾಟರ್ ಪ್ರೂಫ್ ಬಿಂದಿಗಳನ್ನು ಬಳಸುವುದು ಉತ್ತಮ.

ಹೆಚ್ಚು ಟಾಕ್ಸಿಕ್ ಅಂಶವಿರುವ ಬಿಂದಿಯ ಬಳಕೆ ಬೇಡ.

ಉದ್ದ ಮುಖದವರಿಗೆ ಅಗಲವಾದ ಡಿಸೈನ್ ಇರುವ ಬಿಂದಿಗಳು ಚೆನ್ನಾಗಿ ಕಾಣುತ್ತವೆ.

ಮಲಗುವ ಮುನ್ನ ಬಿಂದಿ ತೆಗೆದಿರಿಸುವ ಅಭ್ಯಾಸವಿರಲಿ.

ಅಗಲ ಮುಖದವರಿಗೆ ಸ್ವಲ್ಪ ಉದ್ದವಾದ ಅಥವಾ ಮೊಟ್ಟೆಯಾಕಾರದ ಬಿಂದಿಗಳನ್ನು ಆಯ್ಕೆ ಮಾಡಿಕೊಂಡು ಬಳಸುವುದು ಉತ್ತಮ.

ಅಗಲವಾದ ಹಣೆಯುಳ್ಳವರು ದೊಡ್ಡ ಗಾತ್ರದ ಬಿಂದಿಗಳ ಬದಲು ಚಿಕ್ಕ ಗಾತ್ರದ ಅಗಲವಲ್ಲದ ಬಿಂದಿಗಳನ್ನು ಬಳಸುವುದರಿಂದ ಹಣೆಯು ಅಗಲವಾಗಿ ಕಾಣದಂತೆ ಮರೆಮಾಚ ಬಹುದಾಗಿದೆ.

ಮೊಟ್ಟೆಯಾಕಾರದ ಮುಖವುಳ್ಳವರು ಎಲ್ಲಾ ವಿಧಾನದ ಬಿಂದಿಗಳನ್ನೂ ಬಳಸಬಹುದಾಗಿದೆ. ನೀವು ಬಳಸುವ ಬಿಂದಿಯ ಬಣ್ಣವು ನಿಮ್ಮ ಉಡುಪಿಗೆ ಮ್ಯಾಚ್ ಹೊಂದುವಂತಿದ್ದರೆ ಸಾಕು.

ತ್ರಿಭುಜಾಕೃತಿಯ ಮುಖವುಳ್ಳವರ ಹಣೆಯು ಚಿಕ್ಕದಾಗಿರುತ್ತದೆಯಾದ್ದರಿಂದ ಅವರು ಸ್ವಲ್ಪ ದೊಡ್ಡ ಆಕಾರದ ಬಿಂದಿಗಳನ್ನು ಬಳಸಿದರೆ ಮುಖ ಲಕ್ಷಣವಾಗಿ ಕಾಣುತ್ತದೆ.

ಚಪ್ಪಟೆಯಾಕಾರದ ಮುಖವುಳ್ಳವರು ಅರ್ಧ ಚಂದ್ರಾಕಾರದ ಅಥವಾ ವಿ ಆಕಾರದ ಬಿಂದಿಗಳನ್ನು ಉಪಯೋಗಿಸುವುದು ಮುಖಕ್ಕೆ ಹೆಚ್ಚು ಮೆರುಗನ್ನು ನೀಡುತ್ತದೆ.

ಹೃದಯಾಕಾರದ ಮುಖವುಳ್ಳವರ ಹಣೆ ಎದ್ದು ಕಾಣುತ್ತಿರುತ್ತದೆ. ಆದ್ದರಿಂದ ಅಂಥವರು ಹೊಳೆಯುವ, ಉದ್ದನೆಯ ಆಕಾರದ, ಚಿಕ್ಕ ಬಿಂದಿಗಳನ್ನು ಧರಿಸಿದರೆ ಆಕರ್ಷಕವಾಗಿ ಕಾಣುತ್ತದೆ. ದುಂಡು ಮುಖದವರು ಉದ್ದದ ಬಿಂದಿಗಳನ್ನು ಧರಿಸುವುದು ಉತ್ತಮ. ■